**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 2487/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ, ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿತರು:**

1. ಪ್ರಣವ್ ತಂದೆಃ ಮಂಜುನಾಥ ಭಟ್
 ವಯಸ್ಸುಃ 35 ವರ್ಷ, ವೃತ್ತಿಃ ಅರ್ಚಕರು,
 ಸಾಃ ಎಮ್.ಜಿ.ಎಮ್ ದೇವಸ್ಥಾನದ ರಸ್ತೆ , ಶಿರಾಲಿ, ಭಟ್ಕಳ.

2. ಮಂಜುನಾಥ ತಂದೆಃ ನಾರಾಯಣ ಭಟ್,
 ವಯಸ್ಸುಃ 70 ವರ್ಷ, ವೃತ್ತಿಃ ಅರ್ಚಕರು,
 ಸಾಃ ಎಮ್.ಜಿ.ಎಮ್ ದೇವಸ್ಥಾನದ ರಸ್ತೆ , ಶಿರಾಲಿ, ಭಟ್ಕಳ.

3. ಪದ್ಮಾ ಕೋಂಃ ಮಂಜುನಾಥ ಭಟ್,
 ವಯಸ್ಸುಃ 67 ವರ್ಷ, ವೃತ್ತಿಃ ಗೃಹಿಣಿಸಿ,
 ಸಾಃ ಎಮ್.ಜಿ.ಎಮ್ ದೇವಸ್ಥಾನದ ರಸ್ತೆ , ಶಿರಾಲಿ, ಭಟ್ಕಳ.

**ಃ ದೋಷಾರೋಪಣೆ ಃ**

ಶ್ರೀಮತಿ.ಧನವತಿ. ಬಿ.ಎ.,(ಲಾ)ಎಲ್‌ಎಲ್‌ಬಿ., ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿ, ಭಟ್ಕಳ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಭಟ್ಕಳ ಗ್ರಾಮೀಣ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಭಟ್ಕಳ ತಾಲೂಕಿನ ಭಟ್ಕಳ ಕೊಂಕಣಕೇರಿ ಎಮ್.ಜಿ.ಎಮ್ ದೇವಸ್ಥಾನ ರಸ್ತೆ ಶಿರಾಲಿಯಲ್ಲಿರುವ ಪಿರ್ಯಾದಿ ಸ್ವಪ್ನ ಪ್ರಣವ್ ಭಟ್ ವಾಸದ ಮನೆಯೊಳಗಿನ ಸ್ಥಳವು ಘಟನಾ ಸ್ಥಳವಾಗಿದ್ದು, ನಿಮ್ಮಲ್ಲಿ 1 ಆರೋಪಿತನು ಫಿರ್ಯಾದಿಯ ಗಂಡನಿದ್ದು ನಿಮ್ಮಲ್ಲಿ 2 ಮತ್ತು 3 ನೇ ಆರೋಪಿತರು ಪಿರ್ಯಾದಿಯ ಅತ್ತೆ ಮಾವ ಆಗಿರುತ್ತೀರಿ. ಮದುವೆಯ ಮುಂಚೆ ನಿಮ್ಮಲ್ಲಿ 1 ನೇ ಆರೋಪಿತನು ಪಿರ್ಯಾದಿಯನ್ನು ನೋಡಿ ಮದುವೆಯಾಗಲು 2 ಮತ್ತು 3 ನೇ ಆರೋಪಿತರೊಂದಿಗೆ ಫಿರ್ಯಾದಿಯ ತವರು ಮನಗೆ ಬಂದಾಗ ಫಿರ್ಯಾದಿಯ ತಂದೆಯಾದ ಚಾಸಾ–5 ವೆಂಕಟೇಶ ತಂದೇ ನಾರಾಯಣ ಭಟ್ ಹತ್ತಿರ ನಿಮ್ಮಲ್ಲಿ 1 ಮತ್ತು 2 ನೇ ಆರೋಪಿತರು ರೂ.10,00,000/–ನಗದು ಹಣ ಹಾಗೂ 25 ತೊಲೆ ಚಿನ್ನವನ್ನು ವರೋಪಚಾರವಾಗಿ

ವರದಕ್ಷಿಣೆಯನ್ನು ಕೊಡುವಂತೆ ಕೇಳಿರುತ್ತೀರಿ. ಅಷ್ಟೆಲ್ಲಾ ವರದಕ್ಷಣೆ ಕೊಡಲು ಆಗುವುದಿಲ್ಲಾ ಎಂದು ತಿಳಿಸಿದರೂ ಆರೋಪಿತರಾದ ನೀವುಗಳು ಈ ಮದುವೆಗೆ ಒಪ್ಪಿಕೊಂಡ ನಂತರ ದಿನಾಂಕ : 07/01/2021 ರಂದು ಪಿರ್ಯಾದಿಯ ಮದುವೆಯು ನಿಮ್ಮಲ್ಲಿ 1 ನೇ ಆರೋಪಿತನೊಂದಿಗೆ ಶ್ರೀ ಲಕ್ಷ್ಮೀ ವೆಂಕಟೇಶ ಸಭಾಗೃಹದಲ್ಲಿ ಹಿಂದೂ ಸಂಪ್ರದಾಯದಂತೆ ನಡೆದಿರುತ್ತದೆ. ಚಾಸಾ-10 ಸುಧಾಕರ್ ತಂದೆಃ ಗಂಗಾಧರ್ ವೆರ್ಣೇಕರ್ ರವರು ತಯಾರಿಸಿಕೊಂಡ 7 ತೊಲೆಯ ಚಿನ್ನದ ಆಭರಣಗಳನ್ನು ಮದುವೆಯ ಕಾಲದಲ್ಲಿ ಪಿರ್ಯಾದಿಯ ಮೈಮೇಲೆ ಹಾಕಿ ಕೊಟ್ಟು ರೂ. 4 ಲಕ್ಷ ಹಣವನ್ನು ನಗದಾಗಿ ಫಿರ್ಯಾದಿಯ ತಂದೆಯಾದ ಚಾಸಾ-5 ರವರು ನಿಮ್ಮಲ್ಲಿ 1 ನೇ ಆರೋಪಿತನಿಗೆ ನೀಡಿ ಮದುವೆ ಮಾಡಿಸಿ 3,00,000/- ರೂಪಾಯಿ ಮದುವೆಯ ಖರ್ಚುನ್ನು ಸಹ ಫಿರ್ಯಾದಿಯ ತಂದೆಯವರಿಂದ ವರದಕ್ಷಿಣೆಯಾಗಿ ಪಡೆದುಕೊಂಡು, ಆ ಮೂಲಕ **ವರದಕ್ಷಿಣೆ ಪ್ರತಿಬಂಧಕ ಕಾಯಿದೆ ಕಲಂ 3 ಸಹವಾಚಕ ಭಾರತೀಯ ದಂಡ ಸಂಹಿತೆ ಕಲಂ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೆಯದಾಗಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ಮದುವೆಯ ನಂತರದಲ್ಲಿ ಆರೋಪಿತರಾದ ನೀವುಗಳು ಪಿರ್ಯಾದಿಯನ್ನು ಸಂಪ್ರದಾಯದಂತೆ ತಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೀರಿ. ಸ್ವಲ್ಪ ದಿನಗಳ ನಂತರದಲ್ಲಿ ಆರೋಪಿತರಾದ ನೀವುಗಳು ಮದುವೆಯ ಮುಂಚೆ ಕೇಳಿದ ಮಿಕ್ಕುಳಿದ ಬೇಡಿಕೆಯ ವರದಕ್ಷಿಣೆ ರೂ.6,00,000/- ನಗದು ಹಣ ಹಾಗೂ 18 ತೊಲೆ ಚಿನ್ನವನ್ನು ತವರು ಮನೆಯಿಂದ ತೆಗೆದುಕೊಂಡು ಬರುವಂತೆ ಫಿರ್ಯಾದಿಗೆ ಒತ್ತಾಯಿಸಿದ್ದು, ಆ ಮೂಲಕ **ವರದಕ್ಷಿಣೆ ಪ್ರತಿಬಂಧಕ ಕಾಯಿದೆ ಕಲಂ 4 ಸಹವಾಚಕ ಭಾರತೀಯ ದಂಡ ಸಂಹಿತೆ ಕಲಂ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಮೂರನೆಯದಾಗಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ಪಿರ್ಯಾದಿಯು ಗರ್ಭಿಣಿಯಾಗಿದ್ದು, ವರದಕ್ಷಿಣೆಯ ಚಿನ್ನ ಹಾಗೂ ಹಣವನ್ನು ತವರು ಮನೆಯಿಂದ ತರಲು ಫಿರ್ಯಾದಿಯು ನಿರಾಕರಿಸಿದ್ದಕ್ಕೆ, ನಿಮ್ಮಲ್ಲಿ 2 ಮತ್ತು 3 ನೇ ಆರೋಪಿತರ ಪ್ರಚೋದನೆ ಮೇರೆಗೆ ನಿಮ್ಮಲ್ಲಿ 1 ನೇ ಆರೋಪಿತನು ಫಿರ್ಯಾದಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಚಿತ್ರಹಿಂಸೆ ನೀಡಿ, ಫಿರ್ಯಾದಿಯವರನ್ನು ಮಕ್ಕಳೊಂದಿಗೆ ತವರು ಮನೆಗೆ ಕಳುಹಿಸಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 498 ಎ ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ನಾಲ್ಕನೆಯದಾಗಿ, ದಿನಾಂಕಃ 20/02/2022 ರಂದು ಫಿರ್ಯಾದಿಗೆ ಅವಳ ಜವಳಿ ಮಕ್ಕಳು

ಜನಿಸಿದ್ದು, ನಂತರದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ನಿಮ್ಮಲ್ಲಿ 1 ನೇ ಆರೋಪಿತನು ಫಿರ್ಯಾದಿಗೆ ಹಾಗೂ ಮಕ್ಕಳಿಗೆ ಸರಿಯಾಗಿ ನೋಡಿಕೊಳ್ಳದೇ ಹೊಟ್ಟೆಬಟ್ಟೆಗೆ ಸರಿಯಾಗಿ ನೀಡದೇ ಪಿರ್ಯಾದಿಗೆ ರಂಡೆ ಅಂತಾ ಅವಾಚ್ಯ ಶಬ್ದಗಳಿಂದ ಬೈಯ್ದು, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಐದನೆಯದಾಗಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ಪಿರ್ಯಾದಿಯವರಿಗೆ ಆರೋಪಿಗಳಾದ ನಿಮ್ಮ ಜೊತೆ ಇದ್ದಾಗ ದಿನಾಲು ಕೈಯಿಂದ ಹೊಡೆದು ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಆರನೇಯದಾಗಿ , ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ಪಿರ್ಯಾದಿಯವರಿಗೆ ಆರೋಪಿತರಾದ ನೀವುಗಳು ಹೇಳಿದಂತೆ ವರದಕ್ಷಿಣೆ ತರಲು ನಿರಾಕರಿಸಿದಾಗ ನಿಮ್ಮಲ್ಲಿ 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಗೆ ಪ್ರಚೋದನೆ ನೀಡಿ ಪಿರ್ಯಾದಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಚಿತ್ರಹಿಂಸೆ ನೀಡುವಂತೆ ಮಾಡಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 109 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ನಿಮ್ಮಲ್ಲಿ 1 ನೇ ಆರೋಪಿ ಪಿರ್ಯಾದಿಯವರಿಗೆ ಹಣ ಹಾಗೂ ಚಿನ್ನ ತರುವಂತೆ ಹಿಂಸೆನೀಡಿ ಚೂರಿಯಿಂದ ಕೊಲ್ಲುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿ,ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 06-01-2026. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ.ಸಿ.ನಂಃ 2487/2024</u>**

**ಫಿರ್ಯಾದುದಾರರು:** ಸರಕಾರದ ಪರವಾಗಿ, ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿತರು:** 1. ಪ್ರಣವ್ ತಂದೆಃ ಮಂಜುನಾಥ ಭಟ್

**<u>: ಆರೋಪಣೆ :</u>**

ಪ್ರಶ್ನೆ –1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ – ಹೌದು

ಪ್ರಶ್ನೆ –2ಃ ತಪ್ಪೊಪ್ಪಿಕ್ಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ — ಇಲ್ಲ. ವಿಚಾರಣೆಯಾಗಬೇಕು.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ.

ದಿಃ 06-01-2026

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 2487/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ, ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**- ವಿರುದ್ಧ -**

**ಆರೋಪಿತರು:** 2. ಮಂಜುನಾಥ ತಂದೆಃ ನಾರಾಯಣ ಭಟ್,

**: ಆರೋಪಣೆ :**

ಪ್ರಶ್ನೆ -1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ - ಹೌದು

ಪ್ರಶ್ನೆ -2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ.

ದಿಃ 06-01-2026

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

## ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.

**ಸಿ.ಸಿ.ನಂಃ 2487/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ, ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿತರು:** 3. ಪದ್ಮಾ ಕೋಂಃ ಮಂಜುನಾಥ ಭಟ್,

**: ಆರೋಪಣೆ :**

ಪ್ರಶ್ನೆ –1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ – ಹೌದು

ಪ್ರಶ್ನೆ –2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ.
ದಿಃ 06-01-2026
ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.